ಎಸ್.ಜಿ. ಹವಾಲದಾರ, ಬಾಗಲಕೋಟ

*ಬಿಜೆಪಿಯವರು ಬೋಳುತಲೆಯವರಿಗೆ ಬಾಚಣಿಗೆ ಮಾರಿ ಲಾಭ ಮಾಡಿಕೊಂಡರಂತೆ ನಿಜವೆ?*



ಮತ್ತೊಂದು ಪಕ್ಷ ಬೊಚ್ಚುಬಾಯಿಯವರಿಗೆ ಟೂತ್‌ಬ್ರಷ್ ಮಾರಿತಂತೆ! ಎಲ್ಲ ಪಕ್ಷಗಳೂ ಅಳಿಯ ಅಲ್ಲ, ಮಗಳ ಗಂಡ ಅಷ್ಟೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಜನಪ್ರತಿನಿಧಿಗಳನ್ನು ಎಸ್‌ಎಂಎಸ್ ಮೂಲಕ ಚುನಾಯಿಸುವಂತಿದ್ದರೆ ಹೇಗಿರುತ್ತಿತ್ತು?*

ಬೂತ್ ಕ್ಯಾಪ್ಚರಿಂಗ್ ಬದಲು ಹ್ಯಾಕಿಂಗ್ ಮೂಲಕ ವೋಟಿಂಗ್ ಸಾಗುತ್ತಿತ್ತು!

ಆರಿಫ್, ದಾವಣಗೆರೆ

*ತಾಳ್ಮೆ, ಸಹನೆ ಗಂಡಿಗಿಂತ ಹೆಣ್ಣಿನಲ್ಲಿಯೇ ಹೆಚ್ಚು; ಏಕೆ?*

ಬೇಟೆ ಆಡಲು ಇವೆರಡೂ ಗುಣಗಳು ಇರಲೇಬೇಕೆಂದು ಅವಳಿಗೆ ಗೊತ್ತು!

ಅನಂತಪದ್ಮನಾಭ ಹೆಚ್.ಎಂ. ಮೈಸೂರು

*ಕ್ರೇಜಿ ಸ್ಟಾರ್‌ಗೂ, ಕೇಜ್ರೀವಾಲ್‌ಗೂ ಇರುವ ಸಾಮ್ಯತೆ ಮತ್ತು ಭಿನ್ನತೆ ಏನು?*



ಇಬ್ಬರೂ ಕನಸುಗಾರರೇ; ಕ್ರೇಜಿ ಸ್ಟಾರ್ ಪ್ರೇಮಲೋಕದ ಭ್ರಮೆ ಹುಟ್ಟಿಸಿದರು, ಕೇಜ್ರೀವಾಲ್ ಭ್ರಮಾಲೋಕದ ಪ್ರೇಮ ಹುಟ್ಟಿಸಿದರು!

ಜಾಕೋಬ್ ಡಿಸೋಜ, ಕುರುವಳ್ಳಿ

*ಮನುಷ್ಯನ ವರ್ತನೆಗೂ, ನಡವಳಿಕೆಗೂ ಏನಾದರೂ ವ್ಯತ್ಯಾಸವಿದೆಯೆ?*

ವರ್ತನೆಗೆ ಪರಿಸ್ಥಿತಿ ಆಧಾರ; ನಡವಳಿಕೆಗೆ ಗುಣ ಆಧಾರ!

ಕೆ.ಎಂ. ಲಿಂಗರಾಜು, ನಂಜನಗೂಡು

*ಚೆಲುವೆಯ ಕಂಗಳು ಬೆಳದಿಂಗಳಂತೆ ಕಾಣಲು ಕಾರಣ ಏನಿರಬಹುದು?*

ಕೇಶ, ಹುಬ್ಬು, ರೆಪ್ಪೆಗಳ ಕಡುಕಪ್ಪು ಹಿನ್ನೆಲೆ ಇರುವುದರಿಂದ!

ಉಷೆ ಉ. ಪಡುಬಿದ್ರೆ, ಹೆಜ್ಮಾಡಿ

*ಸಾವಿರಾರು ಗೋಪಿಕೆಯರೊಂದಿಗೆ ಲಾಸ್ಯವಾಡಿದ ಶ್ರೀಕೃಷ್ಣನಿಗೆ ಬ್ರಹ್ಮಚರ್ಯ ಯತಿಗಳಿಂದ ಪೂಜೆ, ಪುರಸ್ಕಾರ ಏಕೆ?*

ಹೆಣ್ಣಿನ ಮನಸ್ಸನ್ನು ಸಂಪೂರ್ಣವಾಗಿ ಅರಿತವನು ಎಂಬ ಬಹುದೊಡ್ಡ ಕಾರಣಕ್ಕೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ನೈಸರ್ಗಿಕ ಪ್ರಕೋಪಗಳಿಂದ ನಾವು ಕಲಿಯಬೇಕಾದ ನೀತಿ ಏನು?*

ನಿರ್ಮಾಣ, ನಿರ್ನಾಮ ಎರಡರಲ್ಲೂ ಮಾನವ ಇನ್ನೂ ಬಹಳ ಎಳಸು ಎಂದು!

ವೆಂಪಾಷ್, ದಕ್ಷಿಣ ಕನ್ನಡ

*ಮದುವೆಯ ನಿಶ್ಚಿತಾರ್ಥದ ಸ್ಥಳದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಾಡುವುದು ಒಳ್ಳೆಯದೋ, ಕೆಟ್ಟದ್ದೋ?*

ಪ್ರದರ್ಶನ ಓಕೆ; ಆದರೆ ಕನ್ನಡಿಗರಿರುವ ಸ್ಥಳದಲ್ಲಿ ಮಾರಾಟ ಕನಸಿನಲ್ಲೂ ಯೋಚಿಸಬೇಡಿ, ಪ್ಲೀಸ್!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಬಾಲ್ಯ-ಮುಪ್ಪುಗಳ ನಡುವಣ ಬದುಕೇ ಮನುಜರಿಗೆ ಹೆಚ್ಚು ಮುದ ನೀಡಲು ಕಾರಣವೇನು?*

ಬಾಲ್ಯದಲ್ಲಿ ಡ್ಯುಯೆಟ್‌ನ ಲಿರಿಕ್ಸ್ ತಿಳಿದಿರುವುದಿಲ್ಲ, ಮುಪ್ಪಿನಲ್ಲಿ ಮರೆತುಹೋಗಿರುತ್ತದೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಪ್ರೀತಿ ಹುಟ್ಟುವುದೇ ಕಣ್ಣಿನಿಂದ. ಆದರೂ ಪ್ರೀತಿ ಕುರುಡು ಎನ್ನುವುದೇಕೆ?*

ಪ್ರೀತಿ ಕುರುಡಾಗಿಲ್ಲದಿದ್ದರೆ ಅಂತಂತಹ ಸುಂದರಿಯರು ಇಂತಿಂತಹ ಹುಡುಗರಿಗೆ ಬೀಳುತ್ತಿರಲಿಲ್ಲ ಬಿಡಿ!

ಪ್ರವೀಣ ಸು. ಜೋರಾಪುರ, ಬೈಲಹೊಂಗಲ

*ಈಗಿನ ಮಾಡ್ರನ್ ಹುಡುಗಿಗೂ, ಆಗಿನ ಅಜ್ಜಿಗೂ ಏನು ವ್ಯತ್ಯಾಸ?*

ಆಗಿನ ಅಜ್ಜಿ ಬಿಗ್ ಬ್ಯೂಟಿಫುಲ್ ಸ್ಟೋರಿ ಬುಕ್; ಮಾಡ್ರನ್ ಹುಡುಗಿ ಟಿಟ್‌ಬಿಟ್ಸ್ ಭರಿತ ಫೇಸ್‌ಬುಕ್!

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಒಂದೊಮ್ಮೆ ಮಾನವನ ಆಯಸ್ಸನ್ನು ಹೆಚ್ಚಿಸುವ ಮಾತ್ರೆಗಳೇನಾದರೂ ಇದ್ದಿದ್ದರೆ...?*

ಆ ಮಾತ್ರೆಗಳಿಗಾಗಿ ಕೊಲೆಗಳು ನಡೆಯುತ್ತಿದ್ದವು!

ಎಚ್.ಆರ್. ದೇಸಾಯಿ, ರಾಯಚೂರು

*ಪ್ರಕೃತಿಯ ಮಕ್ಕಳಾದ ನಮಗೆ ಮುಪ್ಪು, ಸಾವು; ಆದರೆ ಪ್ರಕೃತಿಗೆ ಮುಪ್ಪಿಲ್ಲ, ಸಾವಿಲ್ಲ. ಏಕೆ?*

ಅದಕ್ಕೆ ಬಿಪಿ, ಡಯಾಬಿಟಿಸ್, ಟೆನ್ಷನ್, ಇತ್ಯಾದಿಗಳು ಇಲ್ಲವಲ್ಲ!

ಕುಮಾರ ಚಲವಾದಿ, ಹೊಳೆನರಸಿಪುರ

*ರೈತನಿಗೂ, ಶಿಕ್ಷಕನಿಗೂ, ಸೈನಿಕನಿಗೂ ಇರುವ ಸಾಮಾನ್ಯ ಹೋಲಿಕೆ ಏನು?*

ಕತ್ತೆ ಚಾಕರಿ, ಕಿಲುಬು ಕಾಸು!

ಎಂ.ಎನ್. ಸೋಮಶೇಖರ್, ಮೈಸೂರು

*ದೇವರು ಹೆಣ್ಣಿಗೆ ಬುದ್ಧಿಬಲ, ಗಂಡಿಗೆ ಶರೀರ ಶಕ್ತಿ ಹೆಚ್ಚು ಕೊಟ್ಟಿರುವುದು ಏಕೆ?*



ಹೆಣ್ಣು ಬುದ್ಧಿ ಉಪಯೋಗಿಸಿ ಷಾಪಿಂಗ್ ಮಾಡಲು, ಗಂಡು ಆ ಹೊರೆ ಹೊರಲು!

ಬಿ.ಎನ್. ಸೊಲ್ಲಾಪುರ, ಬೀದರ

*ಸನ್ಯಾಸಿಗಳಿಂದಲೇ ಸರ್ಕಾರ ರಚಿತವಾಗಬಾರದೇಕೆ?*

ಹುಚ್ಚಪ್ಪ; ಆಡಳಿತಕ್ಕೆ ಬೇಕಾದ್ದು ಪಟವಲ್ಲ, ಕಪಟ!

ಆರ್. ಮಧುಸೂದನ್, ಹಾಸನ

*ರಾಮ್, ನೀವು ಜಾಣರೋ ಅಥವಾ ಬುದ್ಧಿಜೀವಿಯೋ?*

ಪ್ರತಿ ವಾರದ ಉತ್ತರಕ್ಕೆ ಬುದ್ಧಿಯನ್ನು ಜೀವಿ ಚೂಪು ಮಾಡಿಕೊಳ್ಳುವವನು!

ಶಿವುಕುಮಾರ್, ಶೋರಾಪೂರ

*ಸ್ವರ್ಗಕ್ಕೆ ಹಾರಿಕೊಂಡು ಹೋಗಬೇಕೋ, ಮೆಟ್ಟಿಲು ಹತ್ತಿಕೊಂಡು ಹೋಗಬೇಕೋ?*

ತಾಳ್ಮೆ ಇರಲಿ; ಯಮನೇ ಅಲ್ಲಿ ನಿಮ್ಮ ರೂಂ ಬುಕ್ ಮಾಡಿ ತನ್ನ ವೆಹಿಕಲ್ ಕಳುಹಿಸುತ್ತಾನೆ.

■ ರಾಮ್